ದಿನಾಂಕ 10-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ - ವಾದಿಯರ ಪರ ಶ್ರೀ ಪಿ.ಎನ್.ಪಿ.ಕೆ.ಆರ್., ವಕೀಲರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

ನಾನು ನನ್ನ ವಾದ ಪತ್ರದ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-1 | ಕ್ರಯದ ಕರಾರು ದಿನಾಂಕ 07-12-2008, |
| ನಿಪಿ-2 | ನಗದು ಪಾವತಿ ರಶೀದಿ ದಿನಾಂಕ 10-12-2008,<br>(ಪ್ರತಿವಾದಿ ಪರ ವಕೀಲರು ಸದರಿ ದಾಖಲಾತಿಯಲ್ಲಿ ತನ್ನ ಸಹಿ ಇರುವುದಿಲ್ಲ ಎಂದು ತಕರಾರು ಎತ್ತಿದ್ದು, ಅದನ್ನು ಪಾಟೀ ಸವಾಲಿನಲ್ಲಿ ಪ್ರಶ್ನಿಸಲು ಅವಕಾಶ ಇರುವ ಕಾರಣ ತಕರಾರನ್ನು ತಿರಸ್ಕರಿಸಲಾಯಿತು) |
| ನಿಪಿ-3 | ನಗದು ಪಾವತಿ ರಶೀದಿ ದಿನಾಂಕ 07-12-2008,<br>(ಪ್ರತಿವಾದಿ ಪರ ವಕೀಲರು ಸದರಿ ದಾಖಲಾತಿಯಲ್ಲಿ ತನ್ನ ಸಹಿ ಇರುವುದಿಲ್ಲ ಎಂದು ತಕರಾರು ಎತ್ತಿದ್ದು, ಅದನ್ನು ಪಾಟೀ ಸವಾಲಿನಲ್ಲಿ ಪ್ರಶ್ನಿಸಲು ಅವಕಾಶ ಇರುವ ಕಾರಣ ತಕರಾರನ್ನು ತಿರಸ್ಕರಿಸಲಾಯಿತು) |
| ನಿಪಿ-4 | ದಾವಾ ಸರ್ವೆ ನಂಬ್ರ 102/7 ಪಿ1 ಇದರ ಪಹಣಿ ಪತ್ರಿಕೆ, |
| ನಿಪಿ-5 | ಡೋರ್ ನಂಬ್ರ 9-3-105 ಇದರ ಆಸ್ತಿ ತೆರಿಗೆ ವಹಿಯ ದೃಢೀಕೃತ ನಕಲು, |
| ನಿಪಿ-6 | ಡೋರ್ ನಂಬ್ರ 9-3-104 ಇದರ ಆಸ್ತಿ ತೆರಿಗೆ ವಹಿಯ ದೃಢೀಕೃತ ನಕಲು, |
| ನಿಪಿ-7 | ದಾವಾ ಆಸ್ತಿಯ ಎಫ್.ಎಂ.ಬಿ ನಕಾಶೆಯ ದೃಢೀಕೃತ ನಕಲು, |
| ನಿಪಿ-8 | ನಮ್ಮ ವಕೀಲರ ಮೂಖಂತರ ಪ್ರತೀವಾದಿಗೆ ಕಳುಹಿಸಿದ ನೋಟೀಸು ದಿನಾಂಕ 04-06-2014 ರ ಕಛೇರಿ ಪ್ರತಿ, |
| ನಿಪಿ-9 ಮತ್ತು 10 | ಅಂಚೆ ಸ್ವೀಕೃತಿಗಳು. |
| ನಿಪಿ-11 | ಅಸಲು ದಾವೆ ನಂಬ್ರ-266/2008 ರ ವಾದ ಪತ್ರದ ದೃಢೀಕೃತ ನಕಲು, |

| | |
|---|---|
| ನಿಪಿ-12 | ಸದರಿ ದಾವೆಯ ಉದಾಹರಣೆಯ ದೃಢೀಕೃತ ನಕಲು, |
| ನಿಪಿ-13 | ಸದರಿ ದಾವೆಯ ಆದೇಶ ಪುಟಗಳ ದೃಢೀಕೃತ ನಕಲು. |

ಆದುದರಿಂದ ದಾವೆಯನ್ನು ಪುರಸ್ಕರಿಸಬೇಕಾಗಿ ಕೋರಿಕೆ.

**ಈ ಹಂತದಲ್ಲಿ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ., ಉಡುಪಿ.